ದೇವರೂ ಒಂದೇ ಅಂತ ನಮ್ಮಪ್ಪ ನಂಗೆ ಹೇಳಿಕೊಟ್ಟಿದ್ದಾರೆ. ಅದೇ ರೀತಿ ನಾನು ಬದುಕಿದ್ದೇನೆ... ಇದನ್ನು ನಿಮಗೆ ಅರ್ಥವಾಗುವಂತೆ ಹೆಂಗೆ ಹೇಳಬೇಕು ಅನ್ನೋದು ಗೊತ್ತಾಗುತ್ತಿಲ್ಲ.' ಅಂತ ಹೇಳಿ ಕೆಲ ಕ್ಷಣ ಸುಮ್ಮನಾದ. ಮತ್ತೆ ಅವನೇ ಮಾತು ಮುಂದುವರಿಸಿದ...

'ನಾನು ಸಣ್ಣವನಿದ್ದಾಗ ತಿರುಪಾಲಶೆಟ್ಟರ ಮನೆಯಲ್ಲಿ ಭಜನೆ ನಡೀತಿತ್ತು. ಶೆಟ್ಟರ ಹಿತ್ತಲಲ್ಲಿ ನಮ್ಮ ಮನೆ ಇತ್ತು. ಕೆಲವು ಸಲ ಸಂಜೆ ಹೊತ್ತು ಅಪ್ಪ ಭಜನೆ ನಡೆಯುವಾಗ ಕಣ್ಣು ಮುಚ್ಚಿ ಕೂರುತ್ತಿದ್ದುದನ್ನು ನಾನು ನೋಡಿದ್ದೆ. ಬೇಸಿಗೆಯಲ್ಲಿ ಶೆಟ್ಟರ ಮನೆಯ ಹಜಾರದಲ್ಲೇ ನಾನು ಮಲಗ್ತ ಇದ್ದೆ. ಬೆಳಗಿನ ಜಾವದ ಭಜನೆ ಮುಗಿಯುವ ಹೊತ್ತಿಗೆ ಎಚ್ಚರವಾಗುತ್ತಿತ್ತು. ಕೊನೆಯಲ್ಲಿ ಹಾಡುತ್ತಿದ್ದ ಮಂಗಳ ಪದ್ಯ ಕೇಳಿಸಿಕೊಳ್ಳುತ್ತಿದ್ದೆ. ಅದನ್ನು ನಾನೂ ಹಾಡುತ್ತಿದ್ದೆ. ಈಗ ಅದನ್ನು ಹಾಡಿ ತೋರಿಸಿದರೆ ನಿಮ್ಮ ದೇವರ ಬಗ್ಗೆ ನಂಗೆ ಗೌರವ ಇದೆ ಅಂತ ನಿಮಗೆ ಅನ್ನಿಸಬೌದು...' ಅಂತ ಹೇಳಿ ಕೆಲವು ಸೆಕೆಂಡುಗಳ ಕಾಲ ಸುಮ್ಮನಿದ್ದು, 'ಹಾಡಲೇ' ಅಂತ ಕೇಳಿದ.

ಮೊದೀನ್ ಸಾಬರು ಮಂಗಳ ಪದ್ಯ ಹಾಡಿದ್ದನ್ನು ಊರವರು ಎಂದೂ ಕೇಳಿರಲಿಲ್ಲ! ಅಲ್ಲಿದ್ದವರಿಗೆಲ್ಲ ಆಶ್ಚರ್ಯ. ಎಲ್ಲರೂ ಉಸಿರು ಬಿಗಿ ಹಿಡಿದು ಮುಂದಿನ ಕ್ಷಣಗಳನ್ನು ನಿರೀಕ್ಷಿಸುತ್ತ ಕೂತರು. ನಿಂತೇ ಇದ್ದ ಮೊದೀನ್ ಎದುರಿಗೆ ಗರ್ಭಗುಡಿಯಲ್ಲಿದ್ದ ಹನುಮಂತ ದೇವರ ಕಡೆ ನೋಡುತ್ತ ಕೈ ಮುಗಿದ. ಕೈ ಮುಗಿದುಕೊಂಡೇ ಕಣ್ಣು ಮುಚ್ಚಿದ...

'ದಾಸ ಜನರಾನಂದದಿಂದ ಪ್ರಚಾರ
ಮಾಡಲಿ ರಾಮಚರಿತೆಯ
ದೇಶವೆಲ್ಲ ಸುಭಿಕ್ಷವಾಗಲಿ ಸಜ್ಜನರು
ನಿರ್ಭಯದಿ ಬಾಳಲಿ ಜಯ ಮಂಗಳವಾಗಲಿ
ಲೋಕಕ್ಕೆಲ್ಲ ಶುಭ ಮಂಗಳ...'

ಅಂತ ರಾಗವಾಗಿ ಹಾಡಿದ. ಕೊನೆಯ ಸಾಲು ಹಾಡುವಾಗ ಅವನ ಕಣ್ಣಲ್ಲಿ ನೀರು ತುಂಬಿ, ಗಂಟಲು ಉಬ್ಬಿ ಬಂತು. ಕಣ್ಣು ಬಿಟ್ಟು ನೋಡಿದರೆ ಎದುರಿಗೆ ಕೂತಿದ್ದವರ ಮುಖಗಳು ಕಲಸಿ ಹೋದಂತೆ ಕಾಣಿಸಿತು. ಮೊದೀನ್ ಮುಂದೇನು ಮಾಡಬಹುದು ಅಂತ ಎಲ್ಲರೂ ನೋಡುತ್ತಲೇ ಇದ್ದರು. ನಿಂತೇ ಇದ್ದ ಮೊದೀನ್ ಮತ್ತೊಮ್ಮೆ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಮುಗಿದು ಹಾಗೇ ಕುಸಿದು ಕೂತ.

ಸಭೆಯಲ್ಲಿದ್ದವರಿಗೆ ಮುಂದೇನು ಮಾಡಬೇಕು ಎನ್ನುವುದು ಗೊತ್ತಾಗಲಿಲ್ಲ. ಎಲ್ಲರೂ ಸುಮ್ಮನೆ ಕೂತುಬಿಟ್ಟರು.

## ಪ್ರೇಮಕುಮಾರ್ ಹರಿಯಬ್ಬೆ

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. ಅವರ ಮೊದಲ ಕಥೆ ಪ್ರಕಟವಾದದ್ದು 1977ರಲ್ಲಿ. ಪ್ರಜಾವಾಣಿ, ಸುಧಾ, ಮಯೂರ ಪತ್ರಿಕೆಗಳಲ್ಲಿ 45ಕ್ಕೂ ಹೆಚ್ಚು ಕಥೆಗಳು ಪ್ರಕಟವಾಗಿವೆ. ಒಂದೆರಡು ಕಥೆಗಳು ಹಿಂದಿಗೆ ಅನುವಾದಗೊಂಡಿವೆ. ಸಾಹಿತ್ಯ ವಿಮರ್ಶೆ, ಸಿನಿಮಾ ಅವರ ಇನ್ನಿತರ ಆಸಕ್ತಿಗಳು.